





ಹಳೆಯ ಘಟನೆಗಳನ್ನು ನೆನಪಿಸಿಕೊಂಡು ಈಗಲೂ ಗದ್ಗದಿತರಾಗುವ ಲೇಖಕ ಆರ್.ಎಲ್. ಶಾಂತ್



‘ಪನೂನ್ ಕಶ್ಮೀರ್’ ಸಂಘಟನೆಯ ಅಗ್ನಿಶೇಖರ್

ಒಂಬತ್ತು ವರ್ಷಗಳ ಹಿಂದೆ ಜಮ್ಮುತವಿ ರೈಲು ನಿಲ್ದಾಣದಲ್ಲಿ ನಾನು ಇಳಿದಂದು ಬೈಸಾಕಿ ಹಬ್ಬ. ಇಡೀ ಜಮ್ಮು ಹಬ್ಬದ ಸಂಭ್ರಮದಲ್ಲಿ ಮುಳುಗಿತ್ತು. ಸಂಜೆವೇಳೆಗೆ ಗಲ್ಲಿ ಗಲ್ಲಿಗಳಲ್ಲಿ ಮೆರವಣಿಗೆಗಳು. ಜಯಘೋಷಗಳು. ಪ್ರಸಾದ ಹಂಚುತ್ತಿದ್ದ ಭಕ್ತರು. ಅವರ ಹಿಂದೆ ಮುಂದೆ ಪೊಲೀಸರ ದಂಡು. ಹಳ್ಳಿಗಳಲ್ಲಿ ಹಬ್ಬ ಹೇಗಿರುತ್ತೋ ಏನೋ ಎಂದು ಯೋಚಿಸುತ್ತ ನಾನು ಮೆರವಣಿಗೆಯತ್ತ ಕಣ್ಣು ಹಾಯಿಸುತ್ತಿದ್ದೆ.

ಯಾವುದೇ ಹೋಟೆಲ್‌ಗಳನ್ನು ಕಾದಿರಿಸದೆ, ಪ್ರೇಕ್ಷಣೀಯ ಸ್ಥಳಗಳನ್ನು ನೋಡುವುದನ್ನು ಮುಖ್ಯವಾಗಿಸಿಕೊಳ್ಳದೇ ಜನರೊಡನೆಯೇ ಇರುವುದು ನನ್ನ ಆ ಒಂಟಿ ಪ್ರಯಾಣದ ಉದ್ದೇಶವಾಗಿತ್ತು.

ಜಮ್ಮುವಿನಲ್ಲಿ ಪದ್ಮಶ್ರೀ ಪುರಸ್ಕೃತ ಡೋಗ್ರಿ ಭಾಷಾ ಲೇಖಕ ನೀಲಾಂಬರ ದೇವ್ ಶರ್ಮಾ, ಡೋಗ್ರಿ ಬರಹಗಾರ ಮನೋಜ್, ನಾಟಕಕಾರ ಮೋಹನ್ ಸಿಂಗ್ ಹೀಗೆ ಹಲವರನ್ನು ಭೇಟಿ ಮಾಡಿದಾಗ ಎಲ್ಲರ ಮಾತುಗಳು ಒಂದೇ ಬಗೆಯಲ್ಲಿದ್ದವು: ‘ವ್ಯಾಲಿಗೆ ಒಬ್ಬರೇ ಹೋಗುತ್ತೀರಾ? ಹೋಗಲೇಬೇಕೇ? ಆಯಿತು, ಹುಷಾರು’.

ಕಾಶ್ಮೀರದಲ್ಲಿ ನನ್ನ ವಸತಿ ಎಲ್ಲಿ ಎಂಬುದು ನಿರ್ಧಾರ ಆಗಿರಲಿಲ್ಲ. ತೋಚಿದಲ್ಲಿಗೆ ಹೋಗುವುದು ಎಂಬ ಉದ್ದೇಶದ ಪಯಣದಲ್ಲಿ ವಸತಿಯನ್ನು ಮುಂಚಿತವಾಗಿ ನಿರ್ಧರಿಸುವುದಾದರೂ ಹೇಗೆ? ಕಾಶ್ಮೀರದ ಕೆಲವು ಲೇಖಕರ ಮಾಹಿತಿಯನ್ನು ಸಂಗ್ರಹಿಸಿದ್ದೆ. ಜಮ್ಮುವಿನಲ್ಲಿ ನಡೆದ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಭಾಗವಹಿಸಿದಾಗ ಅನೇಕರ ಉಲ್ಲೇಖಗಳನ್ನು ಗಮನಿಸಿದ್ದೆ. ಕಾಶ್ಮೀರದಲ್ಲಿ ಜೀಲಾನಿ ಎಂಬ ಟ್ಯಾಕ್ಸಿ ಚಾಲಕನೊಬ್ಬನ ಮಾಹಿತಿಯನ್ನು ಪರಿಚಯಸ್ಥರಿಂದ ಪಡೆದುಕೊಂಡಿದ್ದೆ. ಸದ್ಯಕ್ಕೆ ಅವನ ಮನೆಗೇ ಹೋಗುವುದು ಎಂದು ಹೊರಟ ನಾನು ವ್ಯಾಲಿಯಲ್ಲಿದ್ದ ಹತ್ತೂ ದಿನ ಜೀಲಾನಿ ಮನೆಯಲ್ಲಿದ್ದೆ.

ಮಂಗಳೂರಿನಿಂದ ಬೆಂಗಳೂರಿಗೆ ಪ್ರಯಾಣಿಸಿದಂತೆ ಜಮ್ಮುವಿನಿಂದ ಕಾಶ್ಮೀರಕ್ಕೆ ಘಟ್ಟ ಹತ್ತುತ್ತ ಸಾಗಬೇಕು. ಇಡೀ ಪ್ರಯಾಣವೂ ರಮ್ಯ ಕಾದಂಬರಿಯಂತೆ ಸುಂದರವಾಗಿತ್ತು. ಹಿಂದೂ, ಮುಸ್ಲಿಂ, ಅಲ್ಲಿನ ಬುಡಕಟ್ಟು ಜನರು ಟೆಂಪೋದಲ್ಲಿದ್ದೆವು. ಅಲ್ಲಲ್ಲಿ ನಿಲ್ಲುತ್ತ, ಚಹಾ, ಊಟ ಎನ್ನುತ್ತ ಸುಖವಾದ ಪ್ರಯಾಣ. ಒಬ್ಬರನ್ನೊಬ್ಬರು ತುಸು ಹೆಚ್ಚೇ ಕಾಳಜಿ ಮಾಡಿಕೊಳ್ಳುತ್ತಿದ್ದರು. ಚಂದ್ರಭಾಗಾ (ಚಿನಾಬ್) ನದಿಯ ಹರಿವು, ನೂರಾರು ಬಣ್ಣಗಳ ಹೊತ್ತ ಬೆಟ್ಟಗಳ ಸಾಲು ಸಾಲು ಏರುತ್ತ ಏರುತ್ತ ಸಾಸಿವೆ ಹೊಲಗಳ ಹಳದಿ ಹೂಗಳನ್ನು ಕಾಣುತ್ತಲೇ ಕಥೆ–ಕಾದಂಬರಿಯಲ್ಲಿ ಬರುವ ದೇವಲೋಕದ ನೆನಪಾಯಿತು. ಆಕಾಶದಲ್ಲಿ ಗುಂಗುಹಿಡಿಸುವ ಮೋಡ, ಸಂಜೆಯ ಎಳೆಕಿರಣಗಳು ಕಾಶ್ಮೀರದ ಮೈದಡವುತ್ತಿದ್ದವು. ಜೊತೆಗೆ ರಸ್ತೆಯ ಇಕ್ಕೆಲಗಳಲ್ಲಿ ಗನ್ ಹಿಡಿದ ಸೈನಿಕರು. ಶ್ರೀನಗರಲ್ಲಿ ನಾನಿಳಿಯುವ ಹೊತ್ತಿಗೆ ಕತ್ತಲಾಗಿತ್ತು. ಜೀಲಾನಿ ಕಾಯುತ್ತ ನಿಂತಿದ್ದ.

ಹಜ್ರತ್‌ಬಾಲ್ ದರ್ಗಾದ ಬಳಿಯೇ ಝುಕೋರ್ ಎಂಬಲ್ಲಿ ಜೀಲಾನಿಯ ಪುಟ್ಟ ಮನೆಯಿತ್ತು. ಅಮ್ಮ ಮತ್ತು ತಂಗಿ ರೆಹನಾ ನನ್ನ ಬರಮಾಡಿಕೊಂಡರು. ದರ್ಗಾದ ಬಳಿಯೇ ಕಾಶ್ಮೀರ ವಿಶ್ವವಿದ್ಯಾಲಯ. ಆ ವಿಶ್ವವಿದ್ಯಾಲಯದಲ್ಲಿ ಶೇಕ್ ಉಲ್ ಆಲಂ ಅಧ್ಯಯನ ಪೀಠವಿದೆ. ಲಲ್ಲೇಶ್ವರಿಯ ಶಿಷ್ಯನಾದ ನಂದಋಷಿಯನ್ನು ಶೇಕ್ ಉಲ್ ಆಲಂ ಎಂದು ಗುರುತಿಸುತ್ತಾರೆ. ಲಲ್ಲೇಶ್ವರಿಯ ವಾಕ್‌ಗಳು ಮತ್ತು ನಂದಋಷಿಯ ‘ಶ್ರುಕ್’ಗಳ ಅಧ್ಯಯನದ ದೃಷ್ಟಿಯಿಂದ ಈ ವಿಶ್ವವಿದ್ಯಾಲಯ ಪೀಠ ತೆರೆದಿದೆ. ‘ಮಹಿಳೆಯ ಹೆಸರನ್ನು ಇಡುವುದು ನಮ್ಮ ಸಂಪ್ರದಾಯವಲ್ಲ. ಆದ್ದರಿಂದ ಲಲ್ಲೇಶ್ವರಿ ಹೆಸರಿಡದೇ ಶೇಕ್ ಉಲ್ ಆಲಂ ಹೆಸರಿನ ಪೀಠ ಆರಂಭಿಸಿದ್ದೇವೆ’ ಎಂದು ಅಧಿಕಾರಿಯೊಬ್ಬರು ಹೇಳಿದರು.

ಪೀಠದ ಮುಖ್ಯಸ್ಥರಾದ ಬಶೀರ್ ಅವರು ಅಶ್ಮುಗಾಂವ್ ಎಂಬ ಹಳ್ಳಿಯಲ್ಲಿ ಉರ್ದು ಕಾವ್ಯಗೋಷ್ಠಿ ಏರ್ಪಡಿಸಿದ್ದರು. ವಿಶ್ವವಿದ್ಯಾಲಯದ ಸಾಹಿತ್ಯಾಸಕ್ತರ ತಂಡ ಅಲ್ಲಿಗೆ ಹೊರಟಿತ್ತು. ಅಲ್ಲಿಂದ ಪೆಹಲ್ಗಾಂವ್‌ಗೆ ತೆರಳಿ ಮತ್ತೆ ವಾಪಸ್ ಆಗುವ ಪ್ರಯಾಣ ಅದು.

ದಾರಿಯುದ್ದಕ್ಕೂ ಪಾಳುಬಿದ್ದ ದೇವಸ್ಥಾನಗಳನ್ನು, ಯಜಮಾನನಿಲ್ಲದೆ ಬಿಕೋ ಎಂದು ನಿಂತಿರುವ ಬೃಹತ್ ಮಹಲ್‌ಗಳನ್ನು ತೋರಿಸುತ್ತ ಬಶೀರ್ ವಿವರಿಸುತ್ತಿದ್ದರು. ‘ದೇವಸ್ಥಾನಗಳನ್ನೆಲ್ಲ ಮುರಿದುಹಾಕಿದರು, ಪಂಡಿತರೆಲ್ಲ ಓಡಿಹೋದರು. ಆ ದಿನಗಳು ಬಹಳ ಕೆಟ್ಟದಾಗಿದ್ದವು. ಆದರೆ ಈಗ ನಾವೆಲ್ಲಾ ಚೆನ್ನಾಗಿದ್ದೇವೆ. ಆದ್ದರಿಂದಲೇ ಪ್ರವಾಸಿಗರು ಆರಾಮವಾಗಿ ಬರುತ್ತಿದ್ದಾರೆ. ನೀವು,